**ಸಾಕ್ಷಿಯನ್ನು ದಿಃ 01.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ-**

ಕರೀಗೌಡರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ. ಅವರ ಹೆಂಡತಿ ಹೆಸರು ತಾಯಮ್ಮ. ಕರೀಗೌಡರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ ಅವರ ಹೆಸರು ಬೋರಮ್ಮ ಎಂದರೆ ಸರಿ. ಸದರಿ ಬೋರಮ್ಮ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕರೀಗೌಡರಿಗೆ 3 ಜನ ಹೆಣ್ಣು ಮಕ್ಕಳು, ಒಬ್ಬನೆ ಮಗ ಎಂದು ಬರೆಸಿದ್ದು, ಅವರುಗಳಲ್ಲಿ ಪುಟ್ಟಲಕ್ಷ್ಮಮ್ಮ ತೀರಿಕೊಂಡು 20 ವರ್ಷ ಆಗಿರಬಹುದು. ಅವರಿಗೆ 3 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಸ್ವತ್ಯಮ್ಮ, ಲಲಿತಮ್ಮ ಮತ್ತು ಸಾವಿತ್ರಮ್ಮ ಆಗಿರುತ್ತಾರೆ. ತಿಮ್ಮೇಗೌಡ ಒಬ್ಬನೆ ಗಂಡು ಮಗ. ಪ್ರಮಾಣ ಪತ್ರದಲ್ಲಿ ಪುಟ್ಟಲಕ್ಷ್ಮಮ್ಮನಿಗೆ ಇಬ್ಬರು ಗಂಡು ಮಕ್ಕಳು ಮತ್ತುಇಬ್ಬರುಹೆಣ್ಣು ಮಕ್ಕಳು ಎಂದು ಬರೆಸಿರುತ್ತೇನೆ. ಈಗ ಹೇಳುತ್ತಿರುವುದು ಸರಿಯೋ ಅಥವಾ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸರಿಯೊ ಎಂದರೆ ಅವರು ಹೇಗೆ ಬರೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆಸಿರುವುದನ್ನು ನಾನು ಓದಿಸಿ ಬರೆಸಿರುವುದಿಲ್ಲ. ಪುಟ್ಟಲಕ್ಷ್ಮಮ್ಮ ನ ಗಂಡ ಹೆಸರು ಕೃಷ್ಣೇಗೌಡ.

ಕರೀಗೌಡರ 2 ನೇ ಮಗಳು ತುಳಸಮ್ಮ ಎಂದರೆ ಸರಿ, ಅವರ ಗಂಡನ ಹೆಸರು ಗೊತ್ತಿಲ್ಲ. ಸಾವಿತ್ರಮ್ಮನ ಗಂಡನ ಹೆಸರು ಕಾಳಪ್ಪಣ್ಣ. ಅವರ ಹೆಸರು ಕಾಳಪ್ಪ ಎಂದರೆ ಸರಿ. ಸಾವಿತ್ರಮ್ಮ ತೀರಿ ಹೋಗಿ ಈಗ್ಗೆ 5-6 ಆಗಿರಬಹುದು ದಿನಾಂಕ , ತಿಂಗಳು, ವರ್ಷ ಗೊತ್ತಿಲ್ಲ. ಅದೆ ರೀತಿ ತುಳಸಮ್ಮ ಯಾವಾಗ ತೀರಿಕೊಂಡರು. ತುಳಸಮ್ಮ ನವರಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ಸಾವಿತ್ರಮ್ಮನನಿಗೆ ಇಬ್ಬರು ಗಂಡು ಮಕ್ಕಳು. ಅವರು ಕುಮಾರ ಮತ್ತು ಇನ್ನೊಬ್ಬನ ಹೆಸರು ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಹೆಸರುಗಳನ್ನು ಬರೆಸಿದ್ದು, ಅದನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ ಯಾರು ಎಷ್ಟು ಜನರ ಮೇಲೆ ಕೇಸು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಮೀನು ಬೇರೆಯವರಿಗೆ ಉಳುಮೆ ಮಾಡಲು ಕೊಟ್ಟಿರುತ್ತಾರೆ ಎಂಬ ವಿಷಯಕ್ಕೆ ಈ ದಾವೆ ಹಾಕಿರುತ್ತಾರೆ. ಯಾವ ಯಾವ ಸರ್ವೆ ನಂ., ಎಷ್ಟು ವಿಸ್ತೀರ್ಣದ ಮೇಲೆ ಕೇಸು ಹಾಕಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ತಿಮ್ಮೇಗೌಡರಿಗೆ ಸೇರಿದ ಆಸ್ತಿಗಳು ಇರುತ್ತವೆ. ಸರ್ವೆ ನಂ. 72/6 ತಿಮ್ಮೇಗೌಡರು ಯಾರಿಂದ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪುಟ್ಟಲಕ್ಷ್ಮಮ್ಮನವರ ಹೆಸರಿನಲ್ಲಿ ಸರ್ವೆ ನಂ. 72/2 ರಲ್ಲಿ 2 ಎಕರೆ 23 ಗುಂಟೆ ಜಮೀನು ಇದೆ ಎಂದರೆ ಸರಿ, ಸರ್ವೆ ನಂ. 72/4 ರಲ್ಲಿ 24 ಗುಂಟೆ ಜಮೀನು ಇದೆ ಎಂದರೆ ಸರಿ. ಅದೆ ರೀತಿ ಪುಟ್ಟಲಕ್ಷ್ಮಮ್ಮ ಮತ್ತು ಅವರ ಕುಟುಂಬದ ಹೆಸರಿನಲ್ಲಿ ಸರ್ವೆ ನಂ. 45/1 ರಲ್ಲಿ 33 ಗುಂಟೆ, 45/2 ರಲ್ಲಿ 9 ಗುಂಟೆ, 45/3 ರಲ್ಲಿ 20 ಗುಂಟೆ, 74/2 ರಲ್ಲಿ 2 ಎಕರೆ 5 ಗುಂಟೆ ಮತ್ತು ಮನೆಗಳು, ಬ್ಯಾರನ್ ಮನೆಗಳು ಇದೆ ಎಂದರೆ ಸರಿ. ಅವುಗಳನ್ನು ಈ ದಾವೆಯಲ್ಲಿ ಸೇರಿಸಿದ್ದಾರೊ ಇಲ್ಲವೂ ನನಗೆ ಗೊತ್ತಿಲ್ಲ.

ಪುಟ್ಟಲಕ್ಷ್ಮಮ್ಮನ ಹೆಸರಿಗೆ ಬಂದಿರುವ ಆಸ್ತಿಗಳು ಮೊದಲು ಕರೀಗೌಡರ ಹೆಸರಿನಲ್ಲಿ ಇದ್ದವು. ಬಾಲಕೃಷ್ಣ ಎಂಬುವವರು ನನಗೆ ಗೊತ್ತಿಲ್ಲ. ವಿ.ಕೆ ತಿಮ್ಮೇಗೌಡ ಸರ್ವೆ ನಂ. 72/3 ರಲ್ಲಿ 11 ಗುಂಟೆ, 72/5 ರಲ್ಲಿ 2 ಎಕರೆ 2 ಗುಂಟೆ, 72/6 ರಲ್ಲಿ 1 ಎಕರೆ, 72/7 ರಲ್ಲಿ 1 ಎಕರೆ 2 ಗುಂಟೆ, 72/8 ರಲ್ಲಿ 24 ಗುಂಟೆ , 72/9 ರಲ್ಲಿ 34 ಗುಂಟೆ, 72/10 ರಲ್ಲಿ 35 ಗುಂಟೆ, ವಡ್ಡಂಬಾಳು ಗ್ರಾಮದಲ್ಲಿ ಮನೆ, ಖಾಲಿ ಜಾಗ, ಬ್ಯಾರನ್ ಮನೆಗಳು ಇದ್ದವು ಎಂದರೆ ಸರಿ. ವಿ.ಕೆ ತಿಮ್ಮೇಗೌಡರ ಜೀವಿತಾವಧಿಯಲ್ಲಿ ಎನ್ನೇಲಾ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಜೀವಿತಾವಧಿಯಲ್ಲಿ ಎಲ್ಲಾ ಜಮೀನುಗಳ ಸ್ವಾಧೀನದಲ್ಲಿ ಇದ್ದು ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ಅವರ ಅಕ್ಕ ತಂಗಿಯರು ಇದ್ದರು. ಅಕ್ಕನ ಮಕ್ಕಳು ಇದ್ದರು ಎಂದು ತೋರಿಸಲು ದಾಖಲೆಯನ್ನು ನಾನು ನೋಡಿಲ್ಲ.

ದಾವಾ ಸ್ವತ್ತುಗಳ ಚೆಕ್ಕುಬಂದಿ, ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಜಮೀನ ಸರ್ವೆ ನಂ. ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಮ್ಮ ಜಮೀನಿಗೆ ಸಂಬಂಧಪಟ್ಟಂತೆ ಆರ್.ಟಿ.ಸಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಜಮೀನಿನ ವಿಷಯ ಯಾವುದೂ ಗೊತ್ತಿಲ್ಲದಿದ್ದರೂ ವಾದಿಗಳಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ದಾವಾ ಜಮೀನಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರಾದ ಬಾಲಕೃಷ್ಣ ಮತ್ತು ಅವರ ಹೆಂಡತಿ ಸ್ವಾಧೀನದಲ್ಲಿ ಇದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಕರಣಿಕರರು ಗ್ರಾಮಕ್ಕೆ ಬಂದು ಜಮೀನುಗಳಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಚೆಕ್ಕುಬಂದಿ ಬಗ್ಗೆ ದೃಡೀಕರಣ ಕೊಟ್ಟಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ**

3 ನೇ ಪ್ರತಿವಾದಿ ಏಕಪಕ್ಷಿಯ,

4 ರಿಂದ 8 ನೇ ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.